ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಮತ್ತು ಈಗ ಉಪವಾಸ ಸತ್ಯಾಗ್ರಹ ಮಾಡತಕ್ಕ ಜನರಿಗೆ ಸರ್ಕಾರದವರು ನ್ಯಾಯ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ನೆಪೋಟಿಸಂ, ಫೇವರಿಟಿಸಂ ತೋರಿಸಿ ಹಣ ವಸೂಲ್ಮಾಡಿಕೊಂಡು ನ್ಯಾಯವಾಗಿ ಕೊಡಬೇಕಾದವರಿಗೆ ಕೊಡದೆ ಬೇರೆಯವರಿಗೆ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಆ ಬಗ್ಗೆ ವರದಿ ತರಿಸಿ ಅದು ನಿಜವಾದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

12. ವಿಷಯ : ಸೌಂದತ್ತಿ ಬಿ.ಡಿ.ಒ. ಆಫೀಸ್‌ನಲ್ಲಿ ತೆರವಾಗಿರುವ ಎರಡು ಜೂನಿಯರ್ ಇಂಜಿನಿಯರ್ ಹುದ್ದೆಯನ್ನು ಭರ್ತಿಮಾಡುವ ಬಗ್ಗೆ.

ಶ್ರೀ ಆರ್. ವಿ. ಪಾಟೀಲ್ (ಪರಸಗಡ).— ಸವದತ್ತಿ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಜೂನಿಯರ್ ಇಂಜಿನಿಯರ್ ಒಬ್ಬರನ್ನು 9 ತಿಂಗಳಿಂದ ಅಮಾನತ್ತಿನಲ್ಲಿ ಇಡಲಾಗಿದೆ. ಆ ಜಾಗಕ್ಕೆ ಬೇರೆ ಯಾರನ್ನೂ ನೇಮಿಸದೆ ಮತ್ತು ಅವರ ಬಗ್ಗೆ ವಿಚಾರಣೆಯನ್ನು ಮಾಡದೆ ಅಲ್ಲಿನ ಕೆಲಸ ಕಾರ್ಯಗಳೆಲ್ಲ ಕುಂಠಿತವಾಗಿವೆ. ಇದ್ದವರು ಒಬ್ಬರು ರಜಾ ಹಾಕಿಕೊಂಡು ಕುಳಿತಿದ್ದಾರೆ. ಅವರನ್ನೇನಾದರೂ ಕೇಳಿದರೆ ವರ್ಗಮಾಡಿಕೊಡಿ ಎಂದು ಹೇಳುತ್ತಾರೆ. ಅವರು ಕೆಲಸಕ್ಕೆ ಬಾರದಿದ್ದರೆ ಟಿ.ಡಿ.ಬಿ. ಅಧ್ಯಕ್ಷರು ಬಂದು ನನಗೆ ಹೇಳುತ್ತಾರೆ. ಈಗ ಅಲ್ಲಿ ಅರ್ಧಂಬರ್ಧ ಕಟ್ಟಿದಂತಹ ಜನತಾ ಮನೆಗಳು ಬೀಳತಕ್ಕ ಪರಿಸ್ಥಿತಿಗೆ ಬಂದಿವೆ. ಆದ್ದರಿಂದ ಈಗ ಅಲ್ಲಿ ಸಸ್ಪೆಂಡ್ ಆಗಿರತಕ್ಕ ಜೂನಿಯರ್ ಇಂಜಿನಿಯರನ್ನು ಮತ್ತೆ ಅಲ್ಲಿ ಹಾಕದೆ ಹೊಸದಾಗಿ ಇಬ್ಬರು ಜೂನಿಯರ್ ಇಂಜಿನಿಯರ್‌ಗಳನ್ನು ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಈಗ ಇರತಕ್ಕ ಇಂಜಿನಿಯರುಗಳ ಸಂಖ್ಯೆ ಕಡಿಮೆ ಇದೆ. ಅದ ಕ್ಕೋಸ್ಕರ ರೆಕ್ರೂಟ್‌ಮೆಂಟ್ ಕಮಿಟಿಗೆ ಆದೇಶ ನೀಡಿ ಆದಷ್ಟು ಜಾಗ್ರತೆ ಖಾಲಿ ಇರತಕ್ಕ ಹುದ್ದೆಗಳಿಗೆ ಇಂಜಿನಿಯರ್‌ಗಳನ್ನು ನೇಮಿಸಬೇಕೆಂದು ಸೂಚಿಸಲಾಗಿದೆ. ಆದಷ್ಟು ಬೇಗ ಖಾಲಿ ಇರುವ ಜಾಗಗಳಿಗೆ ಇಂಜಿನಿಯರ್‌ಗಳನ್ನು ಹಾಕುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಮುಖ್ಯಮಂತ್ರಿಗಳು ಅಥವಾ ಸಂಬಂಧಪಟ್ಟ ಮಂತ್ರಿಗಳು ಉತ್ತರ ಹೇಳುವುದಕ್ಕೆ ಅವಕಾಶ ಕಲ್ಪಿಸಿಕೊಡಲಿ ಇದು ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ವಿಷಯ.

13. ವಿಷಯ : ದಿನಾಂಕ 9-12-1984ರಂದು ಶ್ರೀಮತಿ ನಿಂಗವ್ವ ಎಂಬುವರ ಮೇಲೆ ನಡೆದ ಅತ್ಯಾಚಾರ ಹಾಗೂ ಈ ವಿಚಾರದಲ್ಲಿ ತನಿಖೆ ನಡೆಸುವಲ್ಲಿ ಪೋಲೀಸರ ವಿಫಲತೆ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಕಗದಾಳ ಗ್ರಾಮದಲ್ಲಿ 9-2-84ರಂದು ಬಾದಾಮಿ ತಾಲ್ಲೂಕಿನ ಲಿಂಗಪ್ಪ ಭೀಮನಗೌಡ ಎಂಬುವವರು ಕೂಲಿಕೊಟ್ಟು ಜಮೀನು ಕೆಲಸಕ್ಕೆ ಎಂದು ಕರೆದುಕೊಂಡು ಬಂದ ಹೆಣ್ಣುಮಗಳ ಮೇಲೆ ಬಲಾತ್ಕಾರಮಾಡಿ ಆಕೆಯ ಮಾನಭಂಗ ಮಾಡಿದ ಮೇಲೆ ಆಕೆ ಈ ವಿಷಯವನ್ನು ಸಾರ್ವಜನಿಕರಿಗೆ ಹೇಳಿದ್ದಾಳೆ. ನಂತರ ಆಕೆಯನ್ನು ಆ ದಿವಸವೇ ಕಬ್ಬಿಣದ ಬಡಿಗೆಯಿಂದ ಹೊಡೆದು, ಅವಳ ಬಾಯಲ್ಲಿ ರಕ್ತ ಕೂಡ ಬಂದಿದೆ. ರಕ್ತ ಬಂದ ಮೇಲೂ ಆಕೆಯೊಡನೆ ಎಷ್ಟು ಅಮಾನುಷವಾಗಿ ವರ್ತಿಸಿದ್ದಾರೆಂದರೆ, ಹೇಳುವುದಕ್ಕೇ ಹೇಸಿಗೆಯಾಗುತ್ತದೆ. ಇದರ ಬಗ್ಗೆ ಪೋಲೀಸರು ಸರಿಯಾಗಿ ವಿಚಾರಣೆ ಮಾಡದೆ ಒಂದು ಸಣ್ಣ ಕೇಸ್ ಹಾಕಿದ್ದಾರೆ. ಇದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ತಮ್ಮ ಕಡೆ ಕಳುಹಿಸಿಕೊಡುತ್ತೇನೆ. ದಯಮಾಡಿ ಇದರ ಬಗ್ಗೆ ಕೂಡಲೇ ತನಿಖೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ತನಿಖೆ ಮಾಡಿ ಕ್ರಮ ಕೈಗೊಳ್ಳುತ್ತೇವೆ.

14. ವಿಷಯ : ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲಿ ಇರತಕ್ಕ ಅಂಗಡಿಗಳವರಿಗೆ ಮೈಸೂರು ನಗರಸಭೆಯವರು ನೋಟೀಸ್ ಕೊಟ್ಟಿರುವ ವಿಚಾರ.

ಶ್ರೀ ಹೆಚ್. ಗಂಗಾಧರನ್.— ಮೈಸೂರು ನಗರದಲ್ಲಿ ಇರತಕ್ಕ ದೇವರಾಜ ಮಾರುಕಟ್ಟೆಯ ಕಟ್ಟಡ ಸುಮಾರು 50-60 ವರ್ಷ ಹಿಂದಿನದು. ಅಲ್ಲಿ ಸಾವಿರಾರು ಜನರು ವ್ಯಾಪಾರ ಮಾಡುವುದಕ್ಕೆ ಅದನ್ನು ಬಾಡಿಗೆಗೆ ತೆಗೆದುಕೊಂಡು ಜೀವನ ನಡೆಸುತ್ತಿದ್ದಾರೆ. ಆಲ್ಲಿರತಕ್ಕ ಕಟ್ಟಡಗಳೇನೋ ಹಳೆಯದಾಗಿದೆ. ಆದರೆ ಅಲ್ಲಿ ಅಂಗಡಿ ಇಟ್ಟುಕೊಳ್ಳದಿದ್ದರೆ ಅವರು ಜೀವನ ನಡೆಸುವುದಕ್ಕೆ ಸಾಧ್ಯವಿಲ್ಲ. ಈಗ ಅವರಿಗೆ ನಗರಸಭೆಯಿಂದ ನೋಟೀಸ್ ಜಾರಿಮಾಡಿ, ನಿಮ್ಮ ವಾಯಿದೆ ಮುಗಿದಿದೆ, ನೀವು 7 ದಿನಗಳೊಳಗೆ ಖಾಲಿ ಮಾಡತಕ್ಕದ್ದು ಎಂದು ಸೂಚಿಸಿದ್ದಾರೆ. ಅಲ್ಲಿ ಇವತ್ತಿನ ದಿವಸ 15 ಸಾವಿರ ಜನ ವ್ಯಾಪಾರ ಮಾಡಿ ಜೀವನ ಮಾಡುತ್ತಿದ್ದಾರೆ. ಅವರಿಗೆ ಬೇರೆ ಎಲ್ಲಿಯಾದರೂ ವ್ಯವಸ್ಥೆ ಮಾಡಿಕೊಡವೆ ಏಕ್‌ದಂ ಖಾಲಿಮಾಡಿ ಎಂದು ನೋಟೀಸ್ ಕೊಟ್ಟರೆ ಆ 15 ಸಾವಿರ ಜನರನ್ನು ಬೀದಿಗೆ ಹಾಕಿದಂತಾಗುತ್ತದೆ.